# NEWS HIGHLIGHTS




## RARE OP PERFORMED ON WOMEN WITH HEART PROBLEM

### Rare op performed on woman with heart problem

**Mangaluru:** A 35-year-old woman with a birth defect in the heart, causing a mixing of pure and impure blood, underwent heart surgery through a small anterior thoracotomy at KS Hegde Medical Academy (KSHEMA). This was the first time that such a procedure was conducted here.

A hospital representative stated that using a two-and-a-half-inch incision in the right anterior chest wall (avoiding sternal splitting) and connecting the patient to a heart-lung machine through tubes in the groin and neck as well, the surgery was performed. Using specialised instruments, the procedure was successfully carried out by the team including Dr AG Jayakrishnan, Dr M Gopalakrishnan, Dr Manjunath Kamath, Dr Naresh Hegde, Dr Anup Srinivasan, perfusionists, and nurses. The patient was discharged on Saturday. The surgery was carried out free of cost to the patient under the ABARK Scheme. TNN

### ಕೆ.ಎಸ್.ಹೆಗ್ಡೆಯಲ್ಲಿ ಹೃದಯ ರಂಧ್ರ ಶಸ್ತ್ರಚಿಕಿತ್ಸೆ

**ಮಂಗಳೂರು:** ಶುದ್ಧ ಮತ್ತು ಅಶುದ್ಧ ರಕ್ತದ ಮಿಶ್ರಣ ಉಂಟು ಮಾಡುವ ಹೃದಯದ ಜನ್ಮ ದೋಷ ಹೊಂದಿರುವ 35 ವರ್ಷ ವಯಸ್ಸಿನ ಮಹಿಳೆಗೆ ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಆಸ್ಪತ್ರೆ(ಕ್ಷೇಮ)ಯಲ್ಲಿ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ಸಣ್ಣ ಮುಂಭಾಗದ ಥೋರಾಕೋಟಮಿ ಮೂಲಕ ಹೃದಯ ಶಸ್ತ್ರಚಿಕಿತ್ಸೆ ನಡೆಸಿದ್ದು, ಇಂತಹ ಕಾರ್ಯವಿಧಾನ ಇಲ್ಲಿ ನಡೆಸುತ್ತಿರುವುದು ಇದೇ ಪ್ರಥಮವಾಗಿದೆ. ಬಲ ಮುಂಭಾಗದ ಎದೆಯ ಗೋಡೆಯಲ್ಲಿ 2 1/2 ಇಂಚಿನ ಛೇದನವನ್ನು ಬಳಸುವುದು (ಸ್ಟರ್ನಲ್ ವಿಭಜನೆ ತಪ್ಪಿಸುವುದು) ಮತ್ತು ತೊಡೆ ಸಂದು ಹಾಗೂ ಕುತ್ತಿಗೆಯಲ್ಲಿನ ಕೊಳವೆಗಳ ಮೂಲಕ ರೋಗಿಯನ್ನು ಹೃದಯ ಶ್ವಾಸಕೋಶದ ಯಂತ್ರಕ್ಕೆ ಸಂಪರ್ಕಿಸುವ ಪ್ರಕ್ರಿಯೆ ನಡೆಸಲಾಗಿತ್ತು. ವಿಶೇಷ ಉಪಕರಣಗಳನ್ನು ಬಳಸಿಕೊಂಡು ಡಾ.ಎ.ಜಿ.ಜಯಕೃಷ್ಣನ್, ಡಾ.ಎಂ. ಗೋಪಾಲಕೃಷ್ಣನ್, ಡಾ.ಮಂಜುನಾಥ್ ಕಾಮತ್, ಡಾ.ನರೇಶ್ ಹೆಗ್ಡೆ, ಡಾ.ಅನುಪ್ ಶ್ರೀನಿವಾಸನ್ ಮತ್ತು ದಾದಿಯರ ತಂಡದಿಂದ ಕಾರ್ಯವಿಧಾನವನ್ನು ಯಶಸ್ವಿಯಾಗಿ ನಡೆಸಲಾಯಿತು.

ಶಸ್ತ್ರಚಿಕಿತ್ಸೆ ಬಳಿಕ ರೋಗಿ ಚೇತರಿಸಿಕೊಂಡಿದ್ದು, ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ. ಆಯುಷ್ಮಾನ್ ಯೋಜನೆಯಡಿ ರೋಗಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.




ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಆಸ್ಪತ್ರೆ(ಕ್ಷೇಮ)ಯಲ್ಲಿ ಹೃದಯದ ರಂಧ್ರದ ಯಶಸ್ವಿ ಶಸ್ತ್ರಚಿಕಿತ್ಸೆಯಲ್ಲಿ ಭಾಗಿಯಾದ ವೈದ್ಯರು ಮತ್ತು ದಾದಿಯರ ತಂಡ.

ಜನದನಿಯ ಸಾರಥಿ
**ವಾರ್ತಾ ಭಾರತಿ**

### ನಿಟ್ಟೆ: ಹೃದಯ ಕಾಯಿಲೆಗೆ ಅಪರೂಪದ ಶಸ್ತ್ರಚಿಕಿತ್ಸೆ

ಕೊಣಾಜೆ, ಡಿ.28: ಹುಟ್ಟುವಾಗಲೇ ಹೃದಯ ಸಂಬಂಧಿತ ಕಾಯಿಲೆಯಿಂದ ಬಳಲುತ್ತಿದ್ದ 35 ವರ್ಷದ ಮಹಿಳೆಯೊಬ್ಬರಿಗೆ ಕೆ.ಎಸ್.ಹೆಗ್ಡೆ ವೈದ್ಯಕೀಯ ಅಕಾಡಮಿಯ ತಜ್ಞರ ತಂಡವು ವಿಶಿಷ್ಟ ಶಸ್ತ್ರಚಿಕಿತ್ಸೆಯನ್ನು ನಡೆಸುವ ಮೂಲಕ ಯಶಸ್ವಿಯಾಗಿದ್ದಾರೆ.

ಹೃದಯಕ್ಕೆ ಸಂಬಂಧಿಸಿದ ದೋಷದಿಂದಾಗಿ ಶುದ್ಧ ಮತ್ತು ಅಶುದ್ಧ ರಕ್ತವು ಮಿಶ್ರಣವಾಗುತ್ತಿದ್ದ ಸಮಸ್ಯೆಗೆ ಸಂಬಂಧಿಸಿದಂತೆ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.

ವಿಶೇಷ ಆಧುನಿಕ ಉಪಕರಣಗಳನ್ನು




ರೋಗಿ ಶಸ್ತ್ರಚಿಕಿತ್ಸೆಯ ನಂತರ ಉತ್ತಮವಾಗಿ ಚೇತರಿಸಿಕೊಂಡಿದ್ದು